ಇನ್ನೊಂದು ವಿಷಯ. ನಾನು ಗಮನಿಸಿದಂತೆ ಆತನಿಗೆ ಬಾಲ್ಯದ ಬಗ್ಗೆ ಕಿಂಚಿತ್ತೂ ಆಸಕ್ತಿಯಿಲ್ಲ. ಬಾಲ್ಯಸ್ನೇಹಿತ ಎನ್ನುವ ನೆವದಲ್ಲಿಯೇ ಪರಿಚಿತನಾದರೂ ಆತ ನಮ್ಮ ಹಳೆಯ ದಿನಗಳ ಬಗ್ಗೆ, ಊರಿನ ಬಗ್ಗೆ ಎಂದೂ ಏನನ್ನೂ ಮಾತನಾಡಿದ್ದಿಲ್ಲ. ನಾನೇ ಹಳೆಯ ಸುದ್ದಿಗಳನ್ನೆಲ್ಲ ಮೆಲುಕು ಹಾಕಲು ನೋಡಿದರೆ, 'ನನಗ್ಯಾವುದೂ ನೆನಪಿಲ್ಲ' ಎಂದು ತಳ್ಳಿಹಾಕಿಬಿಡುತ್ತಾನೆ. ಬಾಲ್ಯದ ರಸ ಅನುಭವಗಳನ್ನು ನೆನೆದು, ಕಳೆದುಕೊಂಡದ್ದಕ್ಕೆ ಮರುಗದ ಮನುಷ್ಯನೂ ಇದ್ದಾನಲ್ಲ ಎಂಬುದೇ ನನಗೊಂದು ಅಚ್ಚರಿ. ಹೀಗೊಮ್ಮೆ ಆತನ ತಂದೆ ತಾಯಿಯರ ಬಗ್ಗೆ ವಿಚಾರಿಸಿದಾಗ 'ಈಗ ಅವರ್‍ಯಾರೂ ಇಲ್ಲ' ಎಂದಷ್ಟೇ ಹೇಳಿದ್ದ ಆತ; ಹೆಚ್ಚಿನ ವಿವರಗಳನ್ನು ತಿಳಿಸಲು ತನಗೆ ಆಸಕ್ತಿಯಿಲ್ಲ ಎನ್ನುವ ಧಾಟಿಯಲ್ಲಿ. ತನ್ನ ಮೂಲಕ್ಕೆ ಗಂಟು ಬಿದ್ದ ಮನುಷ್ಯ ಜೀವನದಲ್ಲಿ ಎಂದೂ ಮುಂದೆ ಬರುವುದಿಲ್ಲ ಎಂಬುದು ಆತನ ಖಡಾಖಂಡಿತ ಅಭಿಪ್ರಾಯವಾಗಿತ್ತು. 'ನಾವು ಅರಬ್ಬೀ ಸಮುದ್ರದ ಒಂದು ದಿಕ್ಕಿನ ತಟಕ್ಕೆ ಅಂಟಿಕೊಂಡಿರುವ ರಾಜ್ಯದ ಜನ. ಸೂರ್ಯನನ್ನು ಕಂಡಾಗ ಹೂವು ಅರಳುತ್ತದೆ, ಚಂದ್ರನನ್ನು ಕಂಡಾಗ ಶರಧಿ ಉಕ್ಕುತ್ತದೆ, ಸೂರ್ಯ ಕಂತುವುದು ಸಮುದ್ರದಲ್ಲೇ, ಬಿಸಿಲೆಂದರೆ ಸೆಖೆಯೇ ಅಂದುಕೊಂಡಿರುತ್ತೇವೆ. ನಮ್ಮ ಶಾಲೆಯ ಪಾಠಗಳು, ಕವಿಗಳ ಪದ್ಯದ ಸಾಲುಗಳೂ ಇವನ್ನೇ ಹೇಳುತ್ತವೆ. ಇವೆಲ್ಲವನ್ನೂ ಮೀರಿ ಹೊರಬರಬೇಕು. ಗಡಿ ದಾಟಿದಾಗಲೇ ನಮಗೆ ತಿಳಿಯುವುದು. ರಾತ್ರಿಯಲ್ಲೂ ಹೂ ಅರಳುತ್ತವೆ. ಕತ್ತಲಾಗುತ್ತಲೇ ಇಂಗುವ ಸಮುದ್ರವೂ ಇದೆ. ಕಣ್ಣುಕುಕ್ಕುವ ಬಿಸಿಲಲ್ಲೂ ಮೈ ಕೊರೆಯುವ ಚಳಿಯಿರುತ್ತದೆ. ಅದಕ್ಕೇ ನೋಡು ಬಾಲ್ಯಕ್ಕೆ ಅಲವತ್ತುಕೊಂಡ ಮನುಷ್ಯ ಬಾಲಕನಾಗೇ ಇರುತ್ತಾನೆ' ಎಂದು ಆತ ಹೇಳುವಾಗ ಅದರಲ್ಲಿ ತಳ್ಳಿ ಹಾಕುವಂಥದ್ದೇನೂ ನನಗೆ ಕಾಣುವುದಿಲ್ಲ. ನನಗೂ ಇವನಂಥದೇ ಅವಕಾಶಗಳಿದ್ದಿದ್ದರೆ ಹೇಗಿರಬಹುದಿತ್ತಲ್ಲ ಎಂದು ನೆನೆಸಿಕೊಂಡಾಗೆಲ್ಲ ಮನ ಹಿಂಡಿದಂತಾಗುತ್ತದೆ.

